ಮಾಡಿದ್ದಾರೆ. ಈ ಕೆಲಸವನ್ನು ಚುರುಕು ಮಾಡುವ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ. ನಾನು ಇಷ್ಟೇ ಹೇಳುತ್ತೇನೆ, ತಮ್ಮ ಆತಂಕ ಏನು ಹಣ ಕಡಿಮೆ ಇದೆ, ಪ್ರಾನ್‌ನಲ್ಲಿ ಹಣ ಕೊಟ್ಟಿಲ್ಲ ಎನ್ನುವುದು ಇದೆ ಅದನ್ನು ಅರ್ಥ ಮಾಡಿಕೊಳ್ಳುತ್ತೇನೆ. ಜೊತೆಗೆ ಈ ವರ್ಷ ನಾವು ಯಾವ ರೀತಿಯಾಗಿ ಇದಕ್ಕೆ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹಣ ಒದಗಿಸಿಕೊಡುವುದಕ್ಕೆ ಸಾಧ್ಯವೇ ಎನ್ನುವುದನ್ನು ನೋಡುತ್ತೇನೆ. ಆಮೇಲೆ ಕೆಲಸ ಆಗಿಲ್ಲ ಹಣ ಖರ್ಚಾಗಿಲ್ಲ ಎನ್ನುವ ಮಾತು ಅವರು ಹೇಳಲಿಲ್ಲ ನಿಜ. ಆದರೆ ಹಣ ಖರ್ಚಾಗಿದೆ ಕೆಲಸ ಆಗಿಲ್ಲ ಎನ್ನುವುದು ಅವರ ಅಭಿಪ್ರಾಯವಾದರೆ ಅದರ ಬಗ್ಗೆ ಏನು ಗಮನ ಹರಿಸಬೇಕೋ ಅದನ್ನು ನಾನು ಮಾಡುತ್ತೇನೆ.

ಶ್ರೀ ಬಿ.ಎನ್.ಮಹಾಲಿಂಗಪ್ಪ: ಮಾನ್ಯ ಅಧ್ಯಕ್ಷರೇ, 50 ಲಕ್ಷ ರೂಪಾಯಿ ಹಣ ಮಂಜೂರಾಗಿದೆ. ಆ ಲೈನಿಂಗ್ ಕೆಲಸ ಪೂರ್ಣವಾಗಿಲ್ಲ. ಹಣ ಎಷ್ಟು ಖರ್ಚಾಗಿದೆ ಬಿಟ್ಟಿದೆ ಅದು ನನಗೆ ಬೇಕಾಗಿಲ್ಲ. ಅಲ್ಲಿ ಕೆಲಸ ಆಗಿಲ್ಲ. ಈ ಬಗ್ಗೆ ನಾವು ಲಿಖಿತ ರೂಪದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ದೂರು ಸಹ ಕೊಟ್ಟಿದ್ದೇವೆ. ನಮಗೆ ಅಲ್ಲಿ ಕೆಲಸ ಆಗುವುದಕ್ಕೆ ಏನು ಬೇಕೋ ಆ ವ್ಯವಸ್ಥೆ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಶಾಸಕರನ್ನು ಕರೆದು ಈ ಒಟ್ಟು ಯೋಜನೆಯ ಅಭಿವೃದ್ಧಿ ಬಗ್ಗೆ ವಿವರವಾದ ಚರ್ಚೆಯನ್ನು ಮಾಡುತ್ತೇನೆ.

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ನಾಲಾ ಆಧುನೀಕರಣ

202 (1697) ಶ್ರೀ ಕೃಷ್ಣಮೂರ್ತಿ (ಸಂತೇಮರಳ್ಳಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹುಲ್ಲಹಳ್ಳಿ ನಾಲಾ ಆಧುನೀಕರಣಕ್ಕಾಗಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಯಾವ ದಿನಾಂಕದಂದು ದೊರೆಯಿತು; ಈ ಕಾಮಗಾರಿಯು ಪೂರ್ಣಗೊಳ್ಳಲು ತಗಲುವ ಅಂದಾಜು ವೆಚ್ಚ ಎಷ್ಟು; (ವಿವರ ನೀಡುವುದು)

ಆ. ಈ ಕಾಮಗಾರಿಗಾಗಿ ಬಿಡುಗಡೆಯಾಗಿರುವ ಹಣ ಎಷ್ಟು; ಇನ್ನೂ ಎಷ್ಟು ಹಣ ಬಿಡುಗಡೆಯಾಗಬೇಕಿದೆ; ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ; ಯಾವಾಗ ಪೂರ್ಣಗೊಳಿಸಲಾಗುವುದು;

ಇ. ಯಾವ ಆಧಾರದ ಮೇಲೆ ಗುತ್ತಿಗೆ ನೀಡಲಾಗಿದೆ; ಈ ನಾಲೆಯ ಕಾಮಗಾರಿಗಾಗಿ 1 ರಿಂದ 72 ಕಿ.ಮೀ.ವರೆಗೆ ಟೆಂಡರ್‌ನ್ನು ಕರೆಯಲಾಗಿದೆಯೇ; ಇದು ಒಟ್ಟಾಗಿ ಟೆಂಡರ್ ಕರೆಯಲಾಗಿದಿಯೇ ಅಥವಾ ವಿಭಾಗಮಾಡಿ, ಪ್ರತ್ಯೇಕಮಾಡಿ ಟೆಂಡರು ಕರೆಯಲಾಗಿದೆಯೇ; ಆ ರೀತಿ ಟೆಂಡರ್ ಕರೆದಿದ್ದಲ್ಲಿ ಯಾವ ಯಾವ ವಿಭಾಗಕ್ಕೆ ಯಾರು ಯಾರಿಗೆ ಎಷ್ಟೆಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ; (ಪೂರ್ಣ ವಿವರ ನೀಡುವುದು)

ಈ. ಯಾವುದಾದರೂ ವಿಭಾಗಕ್ಕೆ ಟೆಂಡರ್ ಕರೆಯಲಾಗಿಲ್ಲವೇ; ಇಲ್ಲದಿದ್ದಲ್ಲಿ, ಕಾರಣವೇನು? (ಸೇತುವೆಗಳು, ಪೈಪ್ ಔಟ್‌ಲೆಟ್, ಸೋಪಾನ ಕಟ್ಟೆ ಕ್ಯಾಟಲ್‌ಡ್ರಾಪ್ ಸಹಿತ ವಿವರ ನೀಡದು)

ಶ್ರೀ ಹೆಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ. ಹುಲ್ಲಹಳ್ಳಿ ನವೀಕರಣ ಕಾಮಗಾರಿಯ ಯೋಜನೆಗೆ ಸರ್ಕಾರದಿಂದ ದಿನಾಂಕ:15.02.02 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ದಿನಾಂಕ:28.02.02 ರಂದು ಸದರಿ ಯೋಜನೆಯ ರೂ.25.00 ಕೋಟಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತದೆ. ಕಾಮಗಾರಿಯ ವೆಚ್ಚ ಪೂರ್ಣಗೊಂಡ ನಂತರ ಕೊಡಬಹುದಾಗಿದೆ.

ಆ. ಸದರಿ ಕಾಮಗಾರಿಗೆ 2002-03ನೇ ಸಾಲಿನಲ್ಲಿ ರೂ.4.00 ಕೋಟಿ ಅನುದಾನ ನೀಡಿದ್ದು, ಇಲ್ಲಿಯವರೆಗೆ ಈ ಕಾಮಗಾರಿಗಳಿಗೆ ರೂ.15.00 ಲಕ್ಷ ಹಣವನ್ನು ಬಿಡುಗಡೆ ಮಾಡಲಾಗಿದೆ. ರೂ.21.00 ಕೋಟಿ ಅನುದಾನವನ್ನು ಆಯವ್ಯಯ ಮರು ಹೊಂದಾಣಿಕೆಯಲ್ಲಿ ಒದಗಿಸಲಾಗುವುದು.

ಇನ್ನು ಇದಕ್ಕೆ ಸಂಬಂಧಿಸಿದಂತೆ ಪಿ.ಒ. ಕ್ಯಾಟ್‌ಲ್ ರ್ಯಾಂಪ್, ಸೋಪಾನ ಇತ್ಯಾದಿ ಸಣ್ಣ ಕೆಲಸಗಳು ಪೂರ್ಣಗೊಂಡಿದ್ದು, ಲೈನಿಂಗ್ ಮತ್ತು ಅಡ್ಡಮೋರಿ ಕಾಮಗಾರಿಗಳು ಪ್ರಗತಿಯಲ್ಲಿದ್ದು. ಈ ಕಾಮಗಾರಿಗಳನ್ನು ಮುಂಗಾರಿ ಬೆಳೆಗೆ ನೀರನ್ನು ದಿ:25.7.02 ರಿಂದ ಬಿಡಬೇಕಾಗಿರುವುದರಿಂದ ಸದ್ಯದಲ್ಲಿ ಸ್ಥಗಿತಗೊಳಿಸಲಾಗಿದೆ. ಈ ಕಾಮಗಾರಿಗಳನ್ನು ಡಿಸೆಂಬರ್-02 ರಿಂದ ಜನವರಿ-03ರ ವೇಳೆಯಲ್ಲಿ ಪೂರ್ಣಗೊಳಿಸಲಾಗುವುದು.

ಇ. ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದೆ. ನಂಜನಗೂಡು ವಿಭಾಗದಡಿ 1 ರಿಂದ 50 ಕಿ.ಮೀ.ವರೆಗೆ ಹಾಗೂ ಟಿ.ನರಸೀಪುರ ವಿಭಾಗದಡಿ 51 ರಿಂದ 70 ಕಿ.ಮೀ.ವರೆಗೆ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಟೆಂಡರ್ ಕರೆಯಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಈ. ಹುಲ್ಲಹಳ್ಳಿ ಕಾಲುವೆ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಟೆಂಡರ್ ಮೂಲಕವೇ ಕೈಗೊಂಡಿರುತ್ತದೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರನ್ನು ನಾನು ಹುಲ್ಲಹಳ್ಳಿ ನಾಲಾ ಆಧುನೀಕರಣಕ್ಕಾಗಿ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಯಾವ ದಿನಾಂಕದಂದು ದೊರೆಯುತ್ತದೆಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಹುಲ್ಲಹಳ್ಳಿ ನಾಲಾ ನವೀಕರಣಕ್ಕೆ 15-2-2000ದಂದು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿರತಕ್ಕಂಥಾದ್ದು ಹಾಗೇ 28-2-2002ರಂದು ಸದರಿ ಯೋಜನೆಗೆ ಸುಮಾರು 25 ಕೋಟಿ ತಾಂತ್ರಿಕ ಮಂಜೂರಾತಿಯನ್ನು ಕೊಟ್ಟಿರತಕ್ಕಂಥದ್ದರ ಬಗ್ಗೆ ಅವರು ಉತ್ತರ ಕೊಟ್ಟಿದ್ದಾರೆ. ಹಾಗೇ ಮುಂದುವರಿದು ಈ ಕಾಮಗಾರಿಗಾಗಿ ಹಣ ಎಷ್ಟು ಮಂಜೂರಾಗಿದೆ ಎನ್ನುವ ವಿಚಾರಕ್ಕೆ ಸಂಬಂಧಪಟ್ಟಂತೆ ಸದರಿ ಕಾಮಗಾರಿಗೆ 2002-03ರಲ್ಲಿ ಸುಮಾರು 4 ಕೋಟಿ ರೂಪಾಯಿ ಅನುದಾನ ನೀಡಿದ್ದು ಇದುವರೆಗೂ ಸುಮಾರು ಈ ಕಾಮಗಾರಿಗೆ 15 ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಲಾಗಿದೆ. ಇನ್ನು 21 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲಾಗುವುದೆಂದು ಹೇಳಿದ್ದಾರೆ.

11.50 ಎ.ಎಂ

ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ನನ್ನ ಪ್ರಶ್ನೆ ಏನೆಂದರೆ, ಈ ಒಟ್ಟಾರೆ ಬೃಹತ್ ಯೋಜನೆಗೆ ಒನ್ ಥರ್ಡ್ ಗ್ರಾಂಟೇ ಬಿಡುಗಡೆ ಆಗಿಲ್ಲ ಎನ್ನುವ ಅಂಶ ಈ ಒಂದು ಉತ್ತರದಿಂದ ಗೊತ್ತಾಗುತ್ತಿದೆ. ಕೇವಲ 15 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಡಿರತಕ್ಕದ್ದನ್ನು ತಾವು ಉತ್ತರದಲ್ಲಿ

ಹೇಳಿದ್ದೀರಿ. Without one-third grants ಈ ಟೆಂಡರ್ ಅನ್ನು ಕರೆದು, ಕಾಮಗಾರಿಯನ್ನು ಕೈಗೊಳ್ಳುವುದಕ್ಕೆ ಸಾಧ್ಯವೇ ಎನ್ನುವುದಕ್ಕೆ ತಾವು ಮೊದಲನೆಯದಾಗಿ ಸ್ಪಷ್ಟವಾದ ಉತ್ತರವನ್ನು ಕೊಡಬೇಕು. ಹಾಗೆಯೇ ಈ ಒಂದು ವಿಚಾರದಲ್ಲಿ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ? ಯಾವಾಗ ಪೂರ್ಣಗೊಳ್ಳುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ ಪಿ.ಒ.ಕ್ಯಾಟ್‌ಲ್ ರ್ಯಾಂಪ್, ಸೋಪಾನ ಇತ್ಯಾದಿ ಸಣ್ಣ ಕೆಲಸಗಳು ಪೂರ್ಣಗೊಂಡಿದ್ದು, ಲೈನಿಂಗ್ ಮತ್ತು ಅಡ್ಡಮೋರಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮುಂಗಾರು ಬೆಳೆಗೆ 25.07.2002ರಿಂದ ನೀರನ್ನು ಬಿಡಬೇಕಾಗಿರುವುದರಿಂದ ಈ ಕಾಮಗಾರಿಗಳನ್ನು ಸಧ್ಯದಲ್ಲಿ ಸ್ಥಗಿತಗೊಳಿಸಿದ್ದೇವೆ ಎನ್ನುವಂತಹ ಅಂಶವನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಕೂಡ ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳಬಯಸುವುದೇನೆಂದರೆ, ಈ ಒಂದು ಕಾಮಗಾರಿಯನ್ನು, ಒಂದು ಕಡೆ ರೈತರ ದೃಷ್ಟಿಯಿಂದ ಮಾನ್ಯ ಸಚಿವರು ಈ ಒಂದು ಯೋಜನೆಯನ್ನು ಮಂಜೂರು ಮಾಡಿದ್ದಾಗ್ಯೂ ಕೂಡ, ಈ ಒಂದು ಕೆಲಸ ಕಾರ್ಯಗಳು ಬಹಳ ತರಾತುರಿಯಲ್ಲಿ ಬಹಳ ಕಳಪೆ ಗುಣಮಟದಿಂದ ಕೂಡಿರತಕ್ಕಂಥ ಕಾಮಗಾರಿಯಾಗಿದೆ. ಇವತ್ತು ರಾತ್ರಿ ಹಗಲು ಎನ್ನದೇ ಕಾಮಗಾರಿಗಳು ನಡೆದಿವೆ. ಕೇರಳದಲ್ಲಿ ಮಳೆಯಾಗಿರುವುದರಿಂದ ಕಬಿನಿ ಡ್ಯಾಮ್ ತುಂಬಿ ಹೆಚ್ಚುವರಿ ನೀರು ತಮಿಳುನಾಡಿಗೆ ಹೋಗತಕ್ಕಂಥ ಸಂದರ್ಭದಲ್ಲಿ ನಮ್ಮ ರಾಜ್ಯದ ರೈತರಿಗೆ ಇವತ್ತು ನೀರನ್ನು ಸರಿಯಾಗಿ ಈ ಒಂದು ಯೋಜನೆಯಿಂದ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾಳೆಯ ದಿನ ಐ.ಸಿ.ಸಿ. ಮೀಟಿಂಗ್ ಪ್ರಕಾರ, ಇಲ್ಲಿ ಹೇಳಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ದಿನಾಂಕ 25.07.2002ರಿಂದ ನೀರನ್ನು ಬಿಡಬೇಕು ಎಂದು ಹೇಳಿರತಕ್ಕಂಥ ಸಂದರ್ಭದಲ್ಲಿ, ಈ ನೀರನ್ನು ಬಿಟ್ಟಾಗ, ಇವತ್ತು ಏನು ಈ ಕಳಪೆ ಕಾಮಗಾರಿಗಳು ನಡೆದಿವೆ, ಈ ಕಾಮಗಾರಿಗಳು ಕೊಚ್ಚಿ ಹೋಗತಕ್ಕಂಥ ಸಂದರ್ಭ ಬಹಳಷ್ಟು ಇವತ್ತಿನ ದಿವಸ ಆಡಗಿದೆ. ಆದುದರಿಂದ, ಈ ಒಂದು ವಿಚಾರದಲ್ಲಿ ಈಗಾಗಲೇ ಆ ಭಾಗದ ರೈತರು, ಸಂಘ ಸಂಸ್ಥೆಗಳು ಎಲ್ಲರೂ ಕೂ ಪ್ರತಿಭಟನೆ ಮಾಡಿ, ಪತ್ರಿಕೆಗಳಲ್ಲಿ ಕೂಡ ಇದು ಬಂದಿರತಕ್ಕದ್ದನ್ನು ನಾವು ಕಾಣುತ್ತೇವೆ. ಈ ಒಂದು ಕಾಮಗಾರಿ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಬಹಳ ತ್ವರಿತವಾಗಿ, ಬಹಳ ಗಂಭೀರವಾಗಿ ಈ ಒಂದು ವಿಚಾರವನ್ನು ಮನಗಂಡು ಇದನ್ನು ತನಿಖೆ ಮಾಡಿಸಬೇಕು. ಈ ಕಳಪೆ ಕಾಮಗಾರಿಗೆ ಸಂಬಂಧಪಟ್ಟಿರತಕ್ಕಂಥ ಗುತ್ತಿಗೆದಾರರು ಅಥವಾ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ನಾನು ತಮ್ಮ ಮುಖೇನ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೇ, ತಾಂತ್ರಿಕವಾಗಿ ಒನ್ ಥರ್ಡ್ ಹಣವನ್ನು ನಾವು ಇದಕ್ಕೆ ಒದಗಿಸಿದ್ದೇವೆಯೇ? ಹೇಗೆ ಎಂದು ಕೇಳಿದ್ದಾರೆ. ದಿನಾಂಕ 15.02.2002ರಂದು ಈ ಹುಲ್ಲಹಳ್ಳಿ ಚಾನೆಲ್ ಇಂಪ್ರೂವ್‌ಮೆಂಟ್ ಸಲುವಾಗಿ ಈಗಾಗಲೇ ರಾಜ್ಯ ಸಚಿವ ಸಂಪುಟ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟಿದೆ. ಅದಕ್ಕಾಗಿ ಬಜೆಟ್‌ನಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ನಾವು ಪ್ರೊವೈಡ್ ಮಾಡಿದ್ದೆವು. ಅದಲ್ಲದೇ, ಹೆಚ್ಚುವರಿ ಹಣ ಏನು ಬೇಕಾಗುತ್ತದೆ, ಅದಕ್ಕೆ ಮರು ಹೊಂದಾಣಿಕೆ ಮಾಡಿಕೊಳ್ಳಬೇಕು ಎನ್ನುವಂತಹ ನಿರ್ಣಯದಿಂದ ಈಗಾಗಲೇ ನಾವು ಅದನ್ನು ಮಾಡಿದ್ದೇವೆ. ಆದ್ದರಿಂದ ತಾಂತ್ರಿಕವಾಗಿ ಈ ಕೆಲಸ ಪ್ರಾರಂಭ ಮಾಡುವುದಕ್ಕೆ ಏನೂ ಅಭ್ಯಂತರ ಅಥವಾ ತೊಂದರೆ ಇಲ್ಲ. ಇದರ ಜೊತೆಗೆ ಈಗಾಗಲೇ ತಮಗೆ ಗೊತ್ತಿದ್ದ ಹಾಗೆ ಈ ಕೆಲಸವನ್ನು ನಾವು ಮಾಡಬೇಬೇಕಾಗಿತ್ತು. ಏಕೆಂದರೆ

ನೂರು ವರ್ಷದ ಹಳೆಯ ಕಾಲುವೆ ಇದು. ಎಲ್ಲಾ ರೀತಿಯಿಂದಲೂ ಕೂಡ ಇದು ನಾದುರಸ್ತಿಯಾಗಿತ್ತು. ರೈತರೆಲ್ಲರೂ ಒತ್ತಾಯ ಮಾಡುತ್ತಿದ್ದರು. ಅವರು ಈ ಸಲ ನಾವು ಬೆಳೆಯನ್ನು ಬೇಕಾದರೂ ಬಿಡುವುದಕ್ಕೆ ತಯಾರಿದ್ದೇವೆ, ಇದನ್ನು ರಿಪೇರಿ ಮಾಡಿಕೊಡಬೇಕು ಎಂದು ಒತ್ತಾಯ ಮಾಡಿದ್ದರು. ಆ ಹಿನ್ನೆಲೆಯಲ್ಲಿ ಈ ಕೆಲಸವನ್ನು ನಾವು ಕೈಗೆತ್ತಿಕೊಂಡಿದ್ದೆವು. ಕೆಲವು ಕಡೆ quality of works ಕಳಪೆ ಕೆಲಸ ಆಗಿದೆ ಎಂದು ಮಾನ್ಯ ಸದಸ್ಯರು ಈಗಾಗಲೇ ನನ್ನ ಗಮನಕ್ಕೆ ತಂದಿದ್ದಾರೆ. ಆ ಕಳಪೆ ಕೆಲಸ ಆಗಿರತಕ್ಕದ್ದರ ಬಗ್ಗೆ ತಾವು ನಿಖರವಾಗಿರತಕ್ಕಂಥ ಮಾಹಿತಿ ಕೊಟ್ಟರೆ ಸೂಕ್ತವಾಗಿರತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ಕೆಲಸವನ್ನು ಇಷ್ಟೇ ಸಮಯದಲ್ಲಿ ಮುಗಿಸಬೇಕೆಂಬ ಅನಿವಾರ್ಯತೆ ಇರುವುದರಿಂದ ಅತ್ಯಂತ ತ್ವರಿತ ಗತಿಯಿಂದ ಈ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಕಳಪೆ ಕೆಲಸ ಆಗಬಾರದು ಎಂದ್ದೇಳಿ, ತುಂಗಭದ್ರಾ ಲೆಫ್ಟ್ ಬ್ಯಾಂಕ್‌ನ inner strengthening ಕೆಲಸ ಪ್ರಾರಂಭ ಮಾಡಿದಾಗ ನಾವೇನು ಮಾಡಿದ್ದೇವೆ ಎಂದರೆ, ಈ ಕ್ವಾಲಿಟಿ ಕಂಟ್ರೋಲ್ ಸಲುವಾಗಿ ಟಾರ್ ಫೌಂಡೇಷನ್ (ಟಿ.ಆರ್.ಎಫ್.ಎ.)ದವರನ್ನು ನಾವು ಕನ್‌ಕರೆಂಟ್ ಕ್ವಾಲಿಟಿ ಕಂಟ್ರೋಲ್ ಸಲುವಾಗಿ, ಕೆಲಸ ನಡೆಯುತ್ತಿರುವಾಗಲೇ ಅವರು ಕ್ವಾಲಿಟಿ ನೋಡಬೇಕು ಅಂತ್ಹೇಳಿ ಅವರಿಗೆ ಸಾಕಷ್ಟು ಉತ್ತಮವಾಗಿರತಕ್ಕಂಥ ಫೀಸನ್ನು ಕೊಟ್ಟು ಅಲ್ಲಿ ಇಟ್ಟಿದ್ದೇವೆ. ಹುಲ್ಲಹಳ್ಳಿಯಲ್ಲಿಯೂ ಸಹಿತ ಅದೇ ರೀತಿಯಾಗಿರತಕ್ಕಂಥ ಕೆಲಸವನ್ನು ಮಾಡಲು, ಟಾರ್ ಫೌಂಡೇಷನ್‌ದವರನ್ನು ಈಗಾಗಲೇ ನಾವು ಅಲ್ಲಿ ಇಟ್ಟಿದ್ದೇವೆ. ವಿಶ್ವನಾಥ್ ಎಂದ್ಹೇಳಿ ಅದರ ಮುಖ್ಯಸ್ಥರಿದ್ದಾರೆ. ಅವರು ಕ್ವಾಲಿಟಿ ಬಗ್ಗೆ ಸಾಕಷ್ಟು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವಂತಹ ವಿಶ್ವಾಸ ನನ್ನದಾಗಿದೆ. ಆದರೆ ತಾವೇನು ಇವತ್ತು ಸಂದರ್ಭದಲ್ಲಿ ಕೆಲವು ಮಾತನ್ನು ಪ್ರಸ್ತಾಪ ಮಾಡಿದ್ದೀರಿ, ಅದರ ಬಗ್ಗೆ ಸರ್ಕಾರ ಗಮನಿಸುತ್ತದೆ. ಅದರಲ್ಲಿ ಏನಾದರೂ ತಪ್ಪು ಕಂಡು ಬಂದರೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್: ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು: ನಮ್ಮ ಬಳಿ ಸಮಯವೇ ಇಲ್ಲ. ನೀವು ಹೀಗೆ ಉಪ ಪ್ರಶ್ನೆಗಳನ್ನು ಕೇಳುತ್ತಿದ್ದರೆ another ten questions will be lapsed. ಆದಾಗ್ಯೂ ಉಪ ಪ್ರಶ್ನೆಗಳನ್ನು ಕೇಳುತ್ತೇವೆ ಎನ್ನುವುದಾದರೆ ನಿಮಿಷ್ಟ I have no objection. At 12.15 PM I am going to close the question hour. ದಯವಿಟ್ಟು ಇದನ್ನು ತಿಳಿದುಕೊಳ್ಳಿ. ಮಾನ್ಯ ಸದಸ್ಯರುಗಳು ಎಷ್ಟು ಬೇಕೋ ಅಷ್ಟು ಪ್ರಶ್ನೆಗಳನ್ನು ಕೇಳಿಕೊಳ್ಳಿ.

ಶ್ರೀ ಕೆ.ಆರ್.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಮೂರನೆಯದಾಗಿ, ಈ ಒಂದು ಕಾಮಗಾರಿಗೆ ಯಾವ ಆಧಾರದ ಮೇಲೆ ಗುತ್ತಿಗೆಯನ್ನು ನೀಡಲಾಗಿದೆ? ಈ ನಾಲೆ ಕಾಮಗಾರಿಗಳನ್ನು 1ರಿಂದ 27ನೇ ಕಿ.ಮೀ.ವರೆಗೆ ಟೆಂಡರ್ ಅನ್ನು ಕರೆದು ನೀಡಲಾಗಿದೆಯೇ? ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ, ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದೆ, ನಂಜನಗೂಡು ವಿಭಾಗದಡಿ 1ರಿಂದ 50 ಕಿ.ಮೀ.ವರೆಗೆ ಹಾಗೂ ಟಿ.ನರಸೀಪುರ ವಿಭಾಗದಡಿ 51ರಿಂದ 70 ಕಿ.ಮೀ.ರರೆಗೆ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಟೆಂಡರ್ ಕರೆಯಲಾಗಿದೆ, ವಿವರಗಳನ್ನು ಅನುಬಂಧದಲ್ಲಿ ನೀಡಿದೆ ಎಂದು ತಿಳಿಸಿದ್ದಾರೆ. ನಾನಾದರೂ ಕೂಡ ಆ ಭಾಗದ ಶಾಸಕನಾಗಿ ಇವತ್ತು ಈ ಒಂದು ಯೋಜನೆ ಮಂಜೂರಾದ ತಕ್ಷಣ, ಇವತ್ತು ಗುತ್ತಿಗೆದಾರರು ಎಷ್ಟರಮಟ್ಟಿಗೆ ಸರ್ಕಾರವನ್ನು ಮೀರಿ ಮುಂದೆ ಹೋಗಿದ್ದಾರೆ

ಎಂದರೆ, ಈ ಟೆಂಡರ್ ಅಪ್ರೂವ್ ಆಗುವುದಕ್ಕೆ ಮುಂಚೆ ಈ ಕಾಮಗಾರಿಯನ್ನು ಪ್ರಾರಂಭ ಮಾಡಿರುವ ಬಗ್ಗೆ ಮಾನ್ಯ ಮಂತ್ರಿಗಳಿಗೂ ಕೂಡ ದೂರು ಬಂದು, ಮಾನ್ಯ ಮಂತ್ರಿಗಳೂ ಕೂಡ ಆ ಸಂದರ್ಭದಲ್ಲಿ ಆ ಒಂದು ಸ್ಥಳಕ್ಕೆ ಭೇಟಿ ಕೊಟ್ಟಿದ್ದ ಹಿನ್ನೆಲೆಯಲ್ಲಿ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಟೆಂಡರ್ ಅಪ್ರೂವ್ ಆಗುವುದಕ್ಕೆ ಮುಂಚೆಯೇ ಕಾಮಗಾರಿಯನ್ನು ಪ್ರಾರಂಭ ಮಾಡಿ, ಅನಂತರ ರೆಕಾರ್ಡ್ಸ್ ಅನ್ನು ಸ್ಟೆಟ ಮಾಡಿರತಕ್ಕದ್ದನ್ನು, ನಮ್ಮ ಐ.ಸಿ.ಸಿ. ಮೀಟಿಂಗ್‌ನಲ್ಲಿ ಆ ಐ.ಸಿ.ಸಿ. ಮೀಟಿಂಗ್‌ನ ಉನ್ನತಾಧಿಕಾರಿಗಳೂ ಕೂಡ ಅದನ್ನು ಒಪ್ಪಿಕೊಂಡಿದ್ದಾರೆ. ಹಾಗಾಗಿ ಇಂತಹ ವಿಚಾರದಲ್ಲಿ ಮಾನ್ಯ ಹೆಚ್.ಕೆ.ಪಾಟೀಲ್ ಸಾಹೇಬರು ಈ ಒಂದು ಖಾತೆಯ ಮಂತ್ರಿಗಳಾಗಿರುವ ಸಂದರ್ಭದಲ್ಲಿ ಇದು ನಡೆಯಕೂಡದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಇದು ನಡೆದಿರತಕ್ಕಂಥದ್ದು ಸತ್ಯವಾದ ವಿಚಾರ. ಹಾಗಾಗಿ ಈ ಒಂದು ವಿಚಾರದಲ್ಲಿ ಬಹಳ ಗಂಭೀರವಾಗಿ ಮಾನ್ಯ ಸಚಿವರು ಗಮನ ಹರಿಸಿ ಕ್ರಮವನ್ನು ಕೈಗೊಳ್ಳತಕ್ಕಂಥದ್ದು ಆಗಬೇಕು. ಇದಕ್ಕೆ ಸಂಬಂಧಪಟ್ಟಂತೆ, ಟೆಂಡರ್‌ಗಳನ್ನು ಕರೆದಿದ್ದಾಗ್ಯೂ ಮೂರು ಟೆಂಡರ್‌ಗಳನ್ನು ರದ್ದು ಮಾಡಿರತಕ್ಕಂಥ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಮರು ಟೆಂಡರ್ ಕರೆದಿದ್ದರೂ ಕೂಡ ಇವತ್ತು ಯಾರು ಗುತ್ತಿಗೆದಾರರು ಈ ಒಂದು ವಿಚಾರದಲ್ಲಿ ಮುಂದೆ ಬರುತ್ತಿಲ್ಲ. ಇದಕ್ಕೆ ಕಾರಣವೇನು? ಎಂದು ಮಾನ್ಯ ಮಂತ್ರಿಗಳೇ ವಿವರಿಸಬೇಕೆಂದು ನಾನು ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಅಧ್ಯಕ್ಷರು: ಎಲ್ಲರೂ ಉಪ ಪ್ರಶ್ನೆಗಳನ್ನು ಕೇಳಬೇಕೆಂದರೆ ಹೇಗೆ? ಇನ್ನೂ ಒಂಭತ್ತು ಪ್ರಶ್ನೆಗಳು ಬಾಕಿ ಇವೆ. ಅವೆಲ್ಲಾ ಸಮಯಾಭಾವದಿಂದ ಲ್ಯಾಪ್ಸ್ ಆಗಿ ಹೋಗುತ್ತವೆ. ಸದಸ್ಯರು ಸ್ವಲ್ಪ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು.

ಶ್ರೀ ಎ.ರಾಮದಾಸ್: ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಈ ವಿಚಾರದ ಬಗ್ಗೆ ಪ್ರಶ್ನೆಯೊಂದನ್ನು ಕೇಳಿದ್ದೆ. ಆದರೆ ಅದು ಅನ್‌ಸ್ಟಾರ್ಡ್ ಆಯಿತು. ಇಲ್ಲದಿದ್ದರೆ ನಾನು ಇವತ್ತು ಪ್ರಶ್ನೆ ಕೇಳಲಿಕ್ಕೆ ಎದ್ದು ನಿಲ್ಲುತ್ತಿರಲಿಲ್ಲ. ಟಾರ್ ಸ್ಟೀಲ್ ಫೌಂಡೇಷನ್‌ನವರಿಗೆ ಈ ಒಂದು ನಾಲೆ ಕಾಮಗಾರಿಯ ಕ್ವಾಲಿಟಿಯನ್ನು ಚೆಕ್ ಮಾಡಲಿಕ್ಕೆ ವಹಿಸಿದ್ದೇವೆ ಎಂದು ಮಾನ್ಯ ಸಚಿವರು ಇಲ್ಲಿ ತಿಳಿಸಿದರು. ಅವರು ತಮಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ನೂರು ವರ್ಷಗಳ ಈ ನಾಲೆಯನ್ನು ಆಧುನೀಕರಣ ಮಾಡುವಂತಹ ಸಂದರ್ಭದಲ್ಲಿ, ಅಲ್ಲಿಯ ಸಚಿವರ ತೋಟದೊಳಗೆ ಹೋಗಿದ್ದಂತಹ ನಾಲೆಯನ್ನು ಮುಚ್ಚಿ, ಹೊಸ ನಾಲೆಯನ್ನು ನಿರ್ಮಾಣ ಮಾಡಿರುವುದರ ಬಗ್ಗೆ, ಎಂಬಿ ಪುಸ್ತಕಕ್ಕೆ ಅವರು ಸಹಿ ಮಾಡದೇ, ಜೊತೆಗೆ ನಾಲೆಯನ್ನು ಮುಚ್ಚುವುದರ ಬಗ್ಗೆ ಈ ಟೆಂಡರ್‌ನಲ್ಲಿ ಇಲ್ಲ ಎನ್ನುವಂತಹ ವಿಚಾರದ ಬಗ್ಗೆ ದೊಡ್ಡ ವಾಗ್ವಾದ ಆಗಿದೆ. ಅವರು ತಮಗೆ ಇದರ ಬಗ್ಗೆ ವರದಿ ಕಳುಹಿಸಿಲ್ಲ ಎನ್ನುವಂತಾದ್ದು ಕೂಡ ಕಂಪ್ಲೇಂಟ್ ಬಂದಿದೆ. ಆಧುನೀಕರಣದೊಳಗೆ ಇದು ಸೇರಿದೆಯೋ ಇಲ್ಲವೋ? ನೂರು ವರ್ಷದ ನಾಲೆಯನ್ನು ಮುಚ್ಚಿ, ಹೊಸ ನಾಲೆಯನ್ನು ಮಾಡಲಿಕ್ಕೆ ಯಾರು ಪರ್ಮಿಷನ್ ಕೊಟ್ಟರು ಎಂಬುದನ್ನು ಮಾನ್ಯ ಸಚಿವರು ದಯಮಾಡಿ ತಿಳಿಸಬೇಕು.

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್: ಮಾನ್ಯ ಅಧ್ಯಕ್ಷರೇ, ಟಾರ್ ಸ್ಟೀಲ್ ಕಂಪೆನಿಗೆ ಏನೋ ತಾವು ಇನ್ಸ್‌ಪೆಕ್ಷನ್ ಮಾಡುವುದಕ್ಕೆ ವಹಿಸಿದ್ದೀರಿ. ಎರಡು ಲಕ್ಷ ರೂಪಾಯಿಗಳಿಗೆ ಒಳಪಟ್ಟಂತಹ ಕಾಮಗಾರಿಗಳನ್ನು ಇನ್ಸ್‌ಪೆಕ್ಟ್ ಮಾಡುವುದಕ್ಕೆ ಅವರಿಗೆ ಅಧಿಕಾರ

ಕೊಟ್ಟಿಲ್ಲ. ಹೀಗಾಗಿ ಎರಡು ಲಕ್ಷ ರೂಪಾಯಿಗಳಿಗೆ ಒಳಪಟ್ಟಂತಹ ಈ ಸೋಪಾನಗಳನ್ನು ನಿರ್ಮಾಣ ಮಾಡುವುದು, ಪೈಪ್ ಲೈನ್ ಹಾಕುವಂತಾದ್ದು, ಡಿಸ್ಟ್ರಿಬ್ಯೂಷನ್ ಗೇಟ್‌ಗಳನ್ನು ಹಾಕತಕ್ಕಂಥ ಕಾಮಗಾರಿಗಳನ್ನು ಇನ್ಸ್‌ಪೆಕ್ಟ್ ಮಾಡತಕ್ಕಂಥ ಅಧಿಕಾರ ಈ ಟಾರ್ ಸ್ಟೀಲ್ ಕಂಪೆನಿಗೆ ಇಲ್ಲ. ಹೀಗಾಗಿ ಅದರಲ್ಲಿ ಸಾಕಷ್ಟು ಅವ್ಯವಹಾರಗಳು ನಡೆಯುವುದಕ್ಕೆ ಅವಕಾಶವಾಗಿದೆ. ಚಾನೆಲ್‌ನ ಎರಡು ಬದಿಯಲ್ಲಿ ಇರತಕ್ಕಂಥ ಸಾಕಷ್ಟು ಮರಗಳನ್ನೆಲ್ಲಾ ಕಟ್ ಮಾಡಿದ್ದಾರೆ. ಅದಕ್ಕೆ ಅರಣ್ಯ ಇಲಾಖೆಯವರಿಂದ ಯಾವುದೇ ಅನುಮತಿ ತೆಗೆದುಕೊಂಡಿಲ್ಲ, ಅಥವಾ ಕಟ್ ಮಾಡಿದಂತಹ ಮರಗಳನ್ನು ಆಕ್ಷನ್ ಕೂಡ ಮಾಡಿಲ್ಲ, ಅದು ಏನಾಯಿತು ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಈ 1ರಿಂದ 19ನೇ ಕಿ.ಮೀ.ವರೆಗೆ ಏನು ನೀವು ಟೆಂಡರ್ ಕರೆದಿದ್ದೀರೋ ಅದರಲ್ಲಿ ಸಾಮಾನ್ಯವಾಗಿ ಲೋಕಲ್ ಕಾಂಟ್ರಾಕ್ಟರ್ಸ್ ಎಲ್ಲಾ ಕಡೆ ಪಾರ್ಟಿಸಿಪೇಟ್ ಮಾಡುತ್ತಾರೆ. ಪರ್ಟಿಕ್ಯುಲರ್ ಆಗ 1ರಿಂದ 19ನೇ ಕಿ.ಮೀ.ವರೆಗಿನ ಕಾಮಗಾರಿಗೆ ಟೆಂಡರ್ ಕರೆದಾಗ ಲೋಕಲ್ ಕಾಂಟ್ರಾಕ್ಟರ್ ಒಬ್ಬರೂ ಗುತ್ತಿಗೆಗೆ ಅರ್ಜಿ ಹಾಕಿಲ್ಲ. ಇದರ ಒನ್ನೆಲೆ ಏನು? ಗುತ್ತಿಗೆದಾರರ ಸಂಘದಲ್ಲಿ .....

ಅಧ್ಯಕ್ಷರು: ಒಂದೇ ಸಲಕ್ಕೆ ನಾಲ್ಕು ಪ್ರಶ್ನೆಗಳನ್ನು ಕೇಳಿದರೆ ಹೇಗೆ? you must understand the situation. I am very asorry. ಬೇರೆಯವರು ಮೂಲ ಪ್ರಶ್ನೆ ಕೇಳಿದಾಗ, ಮತ್ತೊಬ್ಬ ಸದಸ್ಯರಾದ ತಾವೇ ನಾಲ್ಕು ಉಪ ಪ್ರಶ್ನೆಗಳನ್ನು ಕೇಳಿದರೆ ಹೇಗೆ?

ಶ್ರೀ ಹೆಚ್.ಎಸ್.ಮಹಾದೇವ ಪ್ರಸಾದ್: ಮಾನ್ಯ ಅಧ್ಯಕ್ಷರೇ, ದಯಮಾಡಿ ಇನ್ನೊಂದು ಕೇಳಿ ಬಿಡುತ್ತೇನೆ. ಗುತ್ತಿಗೆದಾರರ ಸಂಘದಲ್ಲಿ ಕೋಟ್ಯಾಂತರ ರೂಪಾಯಿಗಳು ಅವರ ಹಣ ಇರುತ್ತದೆ. ಆ ಹಣ ಅವರಿಗೆ ಎಲ್ಲಿಂದ ಬರುತ್ತದೆ? ಪ್ರತಿಯೊಬ್ಬರೂ ಗುತ್ತಿಗೆದಾರರುಗಳು ಶಾಮೀಲಾಗಿ ಇದನ್ನು ಮಾಡುತ್ತಾರೆ. ಮಾನ್ಯ ಸಚಿವರು ದಕ್ಷರು ಹೆಸರು ಪಡೆದಿದ್ದೀರಿ. ಈ ಗುತ್ತಿಗೆದಾರರ ಸಂಘದಲ್ಲಿ ಏನು ಹಣ ಬ್ಯಾಂಕ್‌ನಲ್ಲಿ ಜಮಾ ಮಾಡುತ್ತಾರೋ, ಆ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಿದರೆ ನಿಮ್ಮ ಟ್ರಾನ್ಸ್‌ಪರೆನ್ಸಿ ಆಕ್ಟ್‌ಗೆ ಒಂದು ಬೆಲೆ ಬರುತ್ತದೆ. ಆಗ ಸರಿಯಾದ ರೀತಿಯಲ್ಲಿ ಕಾಮಗಾರಿಗಳು ನಡೆಯುವುದಕ್ಕೆ ಸಾಯವಾಗುತ್ತದೆ. ಇಲ್ಲದಿದ್ದರೆ, ಗುತ್ತಿದಾರರೇ ಶಾಮೀಲಾಗಿ ಪ್ರತಿಯೊಂದು ಹಂತದಲ್ಲೂ ಕೂಡ ಮಿಸ್‌ಯೂಸ್ ಮಾಡತಕ್ಕದ್ದು ಆಗುತ್ತದೆ. ಅದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕು.

(ಗೊಂದಲ)

ಅಧ್ಯಕ್ಷರು: ನಾಲ್ಕೈದು ಜನ ಮಾನ್ಯ ಸದಸ್ಯರು ಒಟ್ಟಿಗೆ ಮಾತನಾಡುತ್ತಿದ್ದಾರೆ. ಅದು ಯಾವುದನ್ನು ಬರೆದುಕೊಳ್ಳಬೇಡಿ.

ಡಾ: ಭಾರತೀಶಂಕರ್: ಮಾನ್ಯ ಅಧ್ಯಕ್ಷರೆ, ಹುಲ್ಲಹಳ್ಳಿ ನಾಲೆಗೆ ನಮ್ಮ ನೀರಾವರಿ ಸಚಿವರು ವಿಸಿಟ್ ಮಾಡಿ ಬಹಳ ತ್ವರಿತ ಗತಿಯಲ್ಲಿ ರೈತರ ಸಮಸ್ಯೆಗಳನ್ನು ಮನಗಂಡು ಯಾವುದೇ ತೊಡಕುಗಳಿದ್ದರೂ ಅವನ್ನು ನಿವಾರಣೆ ಮಾಡಿ, ಇದು ಒಂದು ಟೈಮ್ ಬೌಂಡ್ ಪ್ರಾಜೆಕ್ಟ್ ಎಂಬುದನ್ನು ಗಮನಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಕ್ರಮ ಕೈಗೊಂಡಿದ್ದಾರೆ. ಒಂದು ಬೆಳೆಗೆ ನೀರು ಹೋದರೆ ಸಾಲದು, ಅವರಿಗೆ ಸುಲಲಿತವಾಗಿ ನೀರು ಹೋಗಬೇಕೆಂದು ವಿಶೇಷವಾದ ಆಸ್ತೆ ವಹಿಸಿ ಕೆಲವು ಉದಾರೀಕರಣ ಸಜೆಸ್ಟ್ ನೀತಿಯನ್ನು ಮಾಡಿ ಬಹಳ ತ್ವರಿತ ಗತಿಯಲ್ಲಿ

ಕೆಲಸ ಮಾಡಿಕೊಟ್ಟಿದ್ದಾರೆ. ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಸರ್ಕಾರವನ್ನು ಕೃತಜ್ಞತೆಯಿಂದ ನೆನೆಸಿಕೊಳ್ಳುತ್ತೇನೆ. ಬಜೆಟ್ ಗ್ರಾಂಟ್ ಇದ್ದುದ್ದು ಕೇವಲ ನಾಲ್ಕು ಕೋಟಿ ರೂಪಾಯಿ. ಅವರು 25 ಕೋಟಿ ರೂಪಾಯಿ ಪ್ರಾಜೆಕ್ಟ್‌ನ್ನು ಇಷ್ಟೊಂದು ತ್ವರಿತ ಗತಿಯಲ್ಲಿ ಮಾಡಿಕೊಟ್ಟಿದ್ದಾರೆ. ಕೆಲವು ಕಾಮಗಾರಿಗಳು ಈಗ ಮುಗಿಯುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಮತ್ತೊಂದು ಬೆಳೆಗೆ ರೈತರಿಗೆ ನಷ್ಟವಾಗುತ್ತಿರುವುದರಿಂದ ನಾನು ಇಂಜಿನಿಯರ್‌ಗಳಿಗೆ, ಗುತ್ತಿಗೆದಾರರಿಗೆ ವಿಂತಿ ಮಾಡಿಕೊಂಡು ಈಗ ಆಗಿರುವಷ್ಟು ಕೆಲಸ ನಿಲ್ಲಿಸಿ ರೈತರಿಗೆ ನೀರು ಕೊಡಿ, ಉಳಿದ ಕಾಮಗಾರಿಗಳನ್ನು ಡಿಸೆಂಬರ್ ನಂತರ ಕೈಗೊಳ್ಳಿ ಎಂದು ಹೇಳುತ್ತಿದ್ದೇವೆ. ಲೈನಿಂಗ್ ವರ್ಕ್ ಮಾತ್ರ ಅಪೂರ್ಣವಾಗಿದೆ. ಅದನ್ನು ಡಿಸೆಂಬರ್ ನಂತರ ಕೈಗೆತ್ತಿಕೊಳ್ಳಬಹುದು. ಇದರಲ್ಲಿ ಯಾವುದೇ ರೀತಿಯ ರಾಜಕೀಯ ಬೆರೆಸುವುದು, ಹೇಳಿಕೆ ಕೊಡುವುದನ್ನು ನಾನು ಖಂಡಿಸುತ್ತೇನೆ. ನಮ್ಮ ಜನ ಬಹಳ ಒಳ್ಳೆಯ ಭಾವನೆಯನ್ನು ಸರ್ಕಾರದ ಮೇಲೆ ಇಟ್ಟುಕೊಂಡಿದ್ದಾರೆ. ಬಹಳ ಒಳ್ಳೆಯ ಕೆಲಸವಾಗಿದೆ. ನೂರಾರು ವರ್ಷಗಳಿಂದ ಇಂತಹ ಕೆಲಸ ಆಗಿರಲಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಎಸ್.ಮಹದೇಶಪ್ರಸಾದ್: ಪ್ರಶ್ನೆ ಕೇಳಿರುವುದು ನಾವು, ಇವರು ಸುಮ್ಮನೆ ಸಮರ್ಥನೆ ಮಾಡುತ್ತಿದ್ದಾರೆ. ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸರ್ಕಾರದ ಮಂತ್ರಿಗಳಿದ್ದಾರೆ. ನಡೆದಿರುವ ಕಾಮಗಾರಿಗಳಲ್ಲಿ ಏನು ಲೋಪವಾಗಿದೆ ಅದನ್ನು ಅವರ ಗಮನಕ್ಕೆ ತರುತಿದ್ದೇವೆ.

(ಗೊಂದಲ)

ಶ್ರೀ ಹೆಚ್.ಕೆ.ಪಾಟೀಲ್: ಆಧ್ಯಕ್ಷರೆ, ಸನ್ಮಾನ್ಯ ಭಾರತೀ ಶಂಕರ್‌ರವರು, ಈ ಕೆಲಸ ಕೈಗೊಂಡಿದ್ದಕ್ಕೆ ಅವರು ಜನರ ಭಾವನೆಗಳನ್ನು ವ್ಯಕ್ತ ಮಾಡಿದರು, ಅವರಿಗೆ ಕೃತಜ್ಞತೆಗಳು ಸನ್ಮಾನ್ಯ ಮಹದೇವ ಪ್ರಸಾದ್‌ರವರು ಮತ್ತು ಕೃಷ್ಣಮೂರ್ತಿಯವರು ನೀವೂ ಅಭಿನಂದನೆ ಮಾಡಿದಿರಿ, ನೀವೂ ಕೃತಜ್ಞತೆ ಹೇಳಿದಿರ್, ನಾವು ನಿಮಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೆಲಸವನ್ನು ತ್ವರಿತ ಗತಿಯಲ್ಲಿ ಟೈಮ್ ಬೌಂಡ್ ಆಗಿ ಮುಗಿಸಬೇಕೆನ್ನುವುದು ಅತ್ಯಂತ ಅನಿವಾರ್ಯದ ಅವಶ್ಯಕತೆ ಇತ್ತು. ಆ ಕೆಲಸ ಪ್ರಾರಂಭ ಮಾಡಿದ್ದೇವೆ. ಕೆಲವು ಕಡೆ ಕೆಲಸ ಪೂರ್ಣವಾಗುವುದಿಲ್ಲ. ಆದರೆ ಹೆಚ್ಚು ಅವಸರ ಮಾಡಿದರೆ ನೀರಾವರಿ ನಿಧಾನವಾಗುತ್ತದೆ. ಹೆಚ್ಚು ಅವಸರ ಮಾಡುವುದಕ್ಕೆ ಹೋಗಿ ಮತ್ತೆ ನೀರು ಬಂದಾಗ ಎಲ್ಲಾ ಅದರಲ್ಲಿ ತೇಲಿಕೊಂಡು ಹೋದವು ಎಂದರೆ, ಸರ್ಕಾರದ ಹಣ ನಷ್ಟವಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಯಾವುದನ್ನು ನಾವು ಮುಂದಿನ ವರ್ಷ ತೆಗೆದುಕೊಳ್ಳಬೇಕು, ಡಿಸೆಂಬರ್‌ನಲ್ಲಿ ತೆಗೆದುಕೊಳ್ಳಬೇಕೆಂದು ಇದೆ. ಅವುಗಳನ್ನು ಆ ಸಂದರ್ಭಕ್ಕೆ ಮುಂದೂಡುತ್ತೇವೆ. ಜೊತೆಗೆ ತಾವು ಏನು ಕೆಲವು ಕಡೆ ಕಳಪೆ ಕೆಲಸ ಆಗಿದೆ ಎಂದು ಹೇಳಿದಿರಿ, ಕಳಪೆ ಕೆಲಸ ಆಗಿರುವುದರ ಬಗ್ಗೆ ಮತ್ತೊಮ್ಮೆ ಕ್ವಾಲಿಟಿ ಕಂಟ್ರೋಲ್ ಸಲುವಾಗಿ ಕೇಳಿದ್ದೇವೆ, ಅವರಿಗೆ ವಿಶೇಷವಾದ ವರದಿ ಕೇಳುತ್ತೇವೆ. ಅದರ ಜೊತೆಗೆ ಕೆಲವು ಶಾಸಕರು ಕೆಲವು ಸ್ಪಾಟ್‌ಗಳನ್ನು ಪ್ರಸ್ತಾಪ ಮಾಡಿ ಇಲ್ಲಿ ಕಳಪೆ ಕೆಲಸ ಆಗಿದೆ ಎಂದು ಹೇಳಿದ್ದಾರೆ. ಎಲ್ಲಿ ಕಳಪೆ ಕೆಲಸ ಆಗಿದೆ ಎಂದು ನೋಡಿ, ಕಳಪೆ ಕೆಲಸ ಆಗಿರತಕ್ಕಂಥದ್ದರ ಬಗ್ಗೆ ಖಚಿತಪಡಿಸಿಕೊಳ್ಳುವುದಕ್ಕೆ ಸೂಕ್ತವಾದ ಅಧಿಕಾರಿಯನ್ನು ಕಳುಹಿಸಿ ಅದನ್ನು ಯಾವ ರೀತಿಯಾಗಿ ಸರಿಪಡಿಸಬಹುದು. ಗುತ್ತಿಗೆದಾರರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ನೋಡುತ್ತೇವೆ. ತಾವು ಸಿಂಡಿಕೇಟ್ ಮಾಡಿಕೊಂಡಿದ್ದರು ಎಂದು ಹೇಳಿದಿರಿ, ಯಾವಾಗ ಯಾವಾಗ ಸಿಂಡಿಕೇಟ್ ಮಾಡಿಕೊಂಡಿದ್ದಾರೆ

ಎಂದು ಯಾರೇ ಬಂದು ಜವಾಬ್ದಿರಿಯುತವಾಗಿ ಮನವರಿಕೆ ಮಾಡಿಕೊಟ್ಟರೆ ತಕ್ಷಣ ಆ ಕೆಲಸಗಳನ್ನು ಕ್ಯಾನ್ಸಲ್ ಮಾಡಿ, ಮತ್ತೆ ಪ್ರಕ್ರಿಯೆ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಸಂದರ್ಭದಲ್ಲಿ ಆಗಿದೆ ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆ ಸಂದರ್ಭದಲ್ಲಿ ತಕರಾರು ಆಗಿದ್ದು ಅದು ನನ್ನ ಗಮನಕ್ಕೆ ಬಂದಿದ್ದರೆ ಕ್ರಮ ತೆಗೆದುಕೊಳ್ಳಬಹುದಾಗಿತ್ತು ಆದರೆ ಏನು ಟೆಂಡರ್ ಕೊಟ್ಟಿದ್ದೇವೆ, ಆ ಟೆಂಡರ್ ಪ್ರಕಾರ ಅವರು ಕೆಲಸ ಮಾಡಬೇಕಾದ್ದು ಅವರ ಜವಾಬ್ದಾರಿ. ಎಲ್ಲೇ ಲೋಪ ಮಾಡಿದರೂ ಅದನ್ನು ಸರಿಪಡಿಸುವ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಚಿಕ್ಕದೇವರಾಯಸಾಗರ ನಾಲೆ ದುರಸ್ತಿ ಕಾರ್ಯ

205 (1704) ಶ್ರೀ ಅಶೋಕ್ ಆರ್ (ಉತ್ತರಹಳ್ಳಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶ್ರೀರಂಗಪಟ್ಟಣ ತಾಲ್ಲೂಕಿನ ಚಿಕ್ಕದೇವರಾಯಸಾಗರ ನಾಲೆ ಒಡೆದು ಅಪಾರ ಪ್ರಮಾಣದ ಬೆಳೆ ನಷ್ಟವಾಗಿರುವುದು ನಿಜವೇ;

ಆ. ಸದರಿ ಕಾಲುವೆ ಒಡೆಯಲು ಕಾರಣವೇನು; ಶಿಥಿಲಗೊಂಡಿತ್ತೇ; ಅಥವಾ ಕಳಪೆ ಗುಣಮಟ್ಟದ ಕಾಮಗಾರಿಕಾರಣವೇ;

ಇ. ಶಿಥಿಲಗೊಂಡಿದ್ದಲ್ಲ, ಮುಂಜಾಗರೂಕತೆಯಿಂದ ದುರಸ್ತಿಗೊಳಿಸಲಿಲ್ಲವೇಕೆ; ಈ ಕಾಲುವೆ ನಿರ್ಮಾಣವಾಗಿ ಎಷ್ಟು ವರ್ಷವಾಯಿತು;

ಈ. ಇದು ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯವಲ್ಲವೇ;

ಉ. ನಷ್ಟದ ಅಧಿಕೃತ ಅಂದಾಜು ಎಷ್ಟು; ಬೆಳೆ ನಾಶಗೊಂಡ ರೈತರಿಗೆ ಪರಿಹಾರಧನ ನೀಡಲಾಗಿದೆಯೇ?

ಶ್ರೀ ಹೆಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ. ಶ್ರೀರಂಗಪಟ್ಟಣ ತಾಲ್ಲೂಕಿನ ಚಿಕ್ಕದೇವರಾಯಸಾಗರ ನಾಲೆಯು ದಿನಾಂಕ:01-11-2001ರಲ್ಲಿ 14/15ನೇ ಮೈಲಿಯಲ್ಲಿ ಒಡೆದು, ಅದರ ಪರಿಣಾಮವಾಗಿ ಬೆಳೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ದಿನಾಂಕ:06-11-2001ರ ರಾತ್ರಿ ಈ ಪ್ರದೇಶದಲ್ಲಿ ಸುರಿದ 72 ಎಂ.ಎಂ.ನಷ್ಟು ಭಾರಿ ಮಳೆಯಿಂದ ನಾಲೆಯು ಒಡೆದಿರುತ್ತದೆ.

ಇ. ಜಲ ಸಂಪನ್ಮೂಲ ಇಲಾಖೆಯವರು ಮುಂಜಾಗ್ರತೆ ಕ್ರಮ ತೆಗೆದುಕೊಂಡಿದ್ದರೂ ಸಹಾ, ಈ ಪ್ರದೇಶದಲ್ಲಿ ಸುರಿದ ಭಾರಿ ಮಳೆಯಿಂದಾಗಿ ನಾಲೆ ಒಡಿದಿರುತ್ತದೆ. ಈ ಕಾಲುವೆಯು ನಿರ್ಮಾಣವಾಗಿ ಸುಮಾರು 300 ವರ್ಷಗಳಾಗಿರುತ್ತದೆ.

ಈ. ಭಾರಿ ಮಳೆಯ ಕಾರಣದಿಂದ ನಾಲೆಯು ಒಡೆದಿದ್ದು, ಇದನ್ನು ಅಧಿಕಾರಿಗಳ ನಿರ್ಲಕ್ಷ್ಯವೆಂದು ಹೇಳಲಾಗುವುದಿಲ್ಲ.

ಉ. ಕಾಲುವೆ ದುರಸ್ಥಿ ವೆಚ್ಚ ರೂ.9.30 ಲಕ್ಷಗಳು ಹಾಗೂ ಬೆಳೆ ಹಾಗೂ ಭೂ ಸವೆತದ ನಷ್ಟ ರೂ.7.24 ಲಕ್ಷಗಳು ಆಗಿರುತ್ತದೆ. ಬೆಳೆ ನಾಶಗೊಂಡ ರೈತರಿಗೆ ಪರಿಹಾರಧನವನ್ನು ಕಂದಾಯ ಇಲಾಖೆಯ ಮುಖಾಂತರ ವಿತರಿಸಲಾಗಿದೆ.

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ನಾನು ಚಿಕ್ಕದೇವರಾಯಸಾಗರ ನಾಲೆ ಒಡೆದು ಹೋಗಿರುವುದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ ಕಾರಣವಲ್ಲವೇ ಎಂದು ಪ್ರಶ್ನೆ ಕೇಳಿದ್ದಕ್ಕೆ